

ಫೇಸ್‌ಬುಕ್ ಮೂಲಕ ಬಾಲಕನೊಬ್ಬನನ್ನು ದುರ್ಬಳಕೆ ಮಾಡಿಕೊಂಡ ಸುದ್ದಿ ಇತ್ತೀಚೆಗೆ ಬಹುತೇಕ ಸುದ್ದಿ ವಾಹಿನಿಗಳಲ್ಲಿ ದೊಡ್ಡ ಚರ್ಚೆಗೆ ಕಾರಣವಾಯಿತು. ಸ್ಮಾರ್ಟ್‌ಫೋನ್ ಮೂಲಕ ಹುಡುಗನ ಸ್ನೇಹವನ್ನು ಗಳಿಸಿಕೊಂಡು, ಅಶ್ಲೀಲ ಕೃತ್ಯಗಳೆಡೆಗೆ ಆತನನ್ನು ಪ್ರೇರೇಪಿಸಿ, ಬಳಿಕ ಹಣದ ಬೇಡಿಕೆಯನ್ನು ಇಟ್ಟು ಬ್ಲ್ಯಾಕ್‌ಮೇಲ್ ಮಾಡಿದ ಘಟನೆಯಿದು. ಮನೆಯಲ್ಲಿ ತಂದೆ ತಾಯಿಯ ವೈಯಕ್ತಿಕ ಕ್ಷಣಗಳನ್ನು ಸೆರೆಹಿಡಿದು ಸ್ನೇಹಿತರ ಜತೆ ಹಂಚಿಕೊಳ್ಳುವುದರ ಘೋರ ಪರಿಣಾಮ ಆ ಬಾಲಕನಿಗೆ ಅರಿವೇ ಇರಲಿಲ್ಲವೆ? ಇದೊಂದು ಬಿಡಿ ಘಟನೆ ಎನ್ನುವಂತಿಲ್ಲ. ಬಯಲಿಗೆ ಬಂದ ಒಂದು ಪ್ರಕರಣವಷ್ಟೆ. ಪೊಲೀಸರ ಪ್ರಕಾರ, ಸಾಕಷ್ಟು ಇಂತಹ ಘಟನೆಗಳು ನಡೆಯುತ್ತಿವೆ; ಆದರೆ ಬಯಲಿಗೆ ಬರುತ್ತಿಲ್ಲ. ಮಕ್ಕಳು ಹೆದರಿಕೊಂಡು, ಅವರ ಪೋಷಕರು ಮರ್ಯಾದೆಗೆ ಅಂಜಿ ಇಂತಹ ಪ್ರಕರಣಗಳನ್ನು ಮರೆಮಾಚುತ್ತಿದ್ದಾರೆ.

ಮಕ್ಕಳ ಮನಸ್ಸು ಅತ್ಯಂತ ಮುಗ್ಧ. ಅದೊಂದು ಹಸಿಮಣ್ಣಿನ ಗೋಡೆ ಇದ್ದಂತೆ. ಅದರ ಮೇಲೆ ಏನನ್ನು ಎಸೆದರೂ ಅಲ್ಲೇ ಅಂಟಿಕೊಂಡು ಬಿಡುತ್ತದೆ ಎನ್ನುವುದು ಮನಃಶಾಸ್ತ್ರಜ್ಞರು ಹೇಳುವ ಮಾತು. ಬಾಲ್ಯದಿಂದ ತೊಡಗಿ ಮಕ್ಕಳ ಬೇರೆ ಬೇರೆ ಹಂತದ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳ ಸಂದರ್ಭದಲ್ಲಿ ಅವರಲ್ಲಿ ಉಂಟಾಗುವ ತುಮುಲ, ಕಳವಳ, ಯಾರ ಜತೆಗೂ ಹೇಳಲಿಕ್ಕಾಗದ ಭಾವನೆಗಳು, ಸುತ್ತಮುತ್ತಲ ವಿದ್ಯಮಾನಗಳ ಬಗೆಗೆ ಕುತೂಹಲ– ಎಲ್ಲವೂ ಸಹಜವೇ. ಈ ಸಂದರ್ಭಗಳಲ್ಲಿ ಮಕ್ಕಳಿಗೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಹೇಳಬಲ್ಲ ಸ್ನೇಹಿತರ ಅಗತ್ಯ ಎದ್ದು ಕಾಣುತ್ತದೆ.

ಮೇಲಿನ ಬಾಲಕನ ಘಟನೆಯನ್ನು ಅವಲೋಕಿಸಿದಾಗ ಅನ್ನಿಸಿದ್ದು– ಬಹುಶಃ ಆ ಹುಡುಗನೂ ಆ ಒಬ್ಬ ಸ್ನೇಹಿತನ ಹುಡುಕಾಟದಲ್ಲಿದ್ದ. ಆದರೆ ಸ್ನೇಹಿತನಂತೆ ಬಂದವನು ರಾಕ್ಷಸನಂತೆ ವರ್ತಿಸಿದ ಅಷ್ಟೆ. ಇಂದು ಬಹುತೇಕ ಮಕ್ಕಳ ಕೈಯಲ್ಲಿ ಸ್ಮಾರ್ಟ್ ಫೋನ್‌ಗಳಿವೆ. ಬಹುತೇಕ ಎಳೆಯರೂ ಇಂಟರ್‌ನೆಟ್ ಮೂಲಕ ಫೇಸ್‌ಬುಕ್ ಅಥವಾ ಟ್ವಿಟ್ಟರ್ ಖಾತೆ ಹೊಂದಿದ್ದಾರೆ. ಇಂಟರ್‌ನೆಟ್ ಸೌಲಭ್ಯ ಅನೇಕ ಸಲ ಸ್ನೇಹಿತನಂತೆ, ಮಾರ್ಗದರ್ಶಕನಂತೆ, ವೈದ್ಯನಂತೆ, ಶಿಕ್ಷಕನಂತೆ, ಅಷ್ಟೇ ಏಕೆ, ಕೆಲವೊಮ್ಮೆ ಪೋಷಕರಂತೆಯೂ ಕಾಣುತ್ತದೆ. ಯಾವುದೇ ಸಮಸ್ಯೆಗೆ ಅಲ್ಲಿ ಪರಿಹಾರ ಕಂಡುಬರುತ್ತದೆ!

ಈಗಿನ ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸಿ. ಅವರಿಗೆ ಸಮಯ ಕಳೆಯಲು ಸ್ನೇಹಿತರ ಅವಶ್ಯಕತೆಯಿಲ್ಲ. ಕೈಯಲ್ಲಿ ಒಂದು ಸ್ಮಾರ್ಟ್‌ಫೋನ್ ಮತ್ತು ಅದಕ್ಕೆ ಅಂತರ್ಜಾಲ ಸಂಪರ್ಕ ಇದ್ದರೆ ಸಾಕು, ಜಗತ್ತೇ ಗೆದ್ದ ಭಾವನೆ ಅವರದು. ಅವರ ಎಲ್ಲಾ ಸಮಸ್ಯೆಗಳಿಗೆ, ಕುತೂಹಲಗಳಿಗೆ ಅಲ್ಲಿ ಉತ್ತರ ದೊರಕುತ್ತದೆ. ಅವರಿಗೆ ಮಾರ್ಗದರ್ಶನವೂ ದೊರಕುತ್ತದೆ. ಆದರೆ ಕೇವಲ ಇಷ್ಟೇನಾ?

## ಇಂಟರ್‌ನೆಟ್ ಎಂಬ ಮಾಯಾಜಾಲ

ಇಲ್ಲ, ಖಂಡಿತಾ ಅಷ್ಟೇ ಅಲ್ಲ. ಅದಕ್ಕಿಂತ ಹೆಚ್ಚಾಗಿ ಮೊಬೈಲ್‌ನ ಇಂಟರ್‌ನೆಟ್‌ನ ಮಾಯಾಜಾಲ ಅವರನ್ನು ಆವರಿಸುತ್ತದೆ. ತನ್ನ ದಾಸನನ್ನಾಗಿ ಮಾಡಿಕೊಳ್ಳುತ್ತದೆ. ಅವರ ಮನಸ್ಸು ಮತ್ತು ಅವರ ದೇಹವೂ ಮುಂದೆ ಅವರ ನಿಯಂತ್ರಣದಲ್ಲಿ ಇರುವುದಿಲ್ಲ, ಮೊಬೈಲ್‌ನ ನಿಯಂತ್ರಣಕ್ಕೆ ಬರುತ್ತದೆ.

ಮಕ್ಕಳು ಪ್ರೌಢರಾಗುವ ಹಂತ ಬಹಳ ಸೂಕ್ಷ್ಮವಾದದ್ದು. ಮಕ್ಕಳು ಪ್ರೌಢರಾಗುವ ಸಂದರ್ಭದಲ್ಲಿ ಪೋಷಕರು ಮಕ್ಕಳ ಮೇಲೆ ಹಲವು ನಿಯಂತ್ರಣಗಳನ್ನು ಹೇರತೊಡಗುವುದು ಸರ್ವೇಸಾಮಾನ್ಯ. ಸಿನಿಮಾ ನೋಡಬೇಡ, ಸೀರಿಯಲ್ ನೋಡಬೇಡ, ಅದು ಮಾಡಬೇಡ, ಹಾಗೆ ಮಾಡಬೇಡ, ಇದು ನೋಡಬೇಡ, ಆ ಬಟ್ಟೆ ಹಾಕಬೇಡ, ಅವರ ಬಳಿ